2017 ಕ.ತೀ.ವ. 540

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

## ಕರ್ನಾಟಕ ರಾಜ್ಯ, (ಬಸವೇಶ್ವರ ನಗರ ಪೊಲೀಸ್ ಠಾಣೆ), ಬೆಂಗಳೂರು –ವಿರುದ್ಧ– ಗೋವಿಂದ*

ದಂಡ ಪ್ರಕ್ರಿಯಾ ಸಂಹಿತೆ ಕಲಂ 401 ಜೊತೆಗೋದಿದಂತೆ ಕಲಂ 397ರಡಿಯಲ್ಲಿ ಪರಿಷ್ಕರಣಾ ಅರ್ಜಿ.

ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿ.

ಐ.ಪಿ.ಸಿ.ಕಲಂ 399 ಹಾಗೂ 402

ಇತರ ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆ ಕಲಂ 399 ಹಾಗೂ ಕಲಂ 402ರಡಿಯಲ್ಲಿ ಶಿಕ್ಷಾರ್ಹವಾದ ಪ್ರಕರಣಗಳಲ್ಲಿ ಆರೋಪ ಮುಕ್ತಗೊಂಡ ಸಂದರ್ಭದಲ್ಲಿ ಎದುರುದಾರರನ್ನು ಮೊಕದ್ದಮೆಯಿಂದ ಖುಲಾಸೆಗೊಳಿಸಿ ಅಂತ್ಯಗೊಳಿಸಿ ಹೊರಡಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿ.

ಮುಖ್ಯ ಮೊಕದ್ದಮೆಯ ಫಲಿತಾಂಶವನ್ನು ವಿಭಜನೆಗೊಂಡ ದೋಷಾರೋಪಣಾ ಪಟ್ಟಿಯ ಫಲಿತಾಂಶವೂ ಹಿಂಬಾಲಿಸಬೇಕೆಂಬ ಏಕಪ್ರಕಾರವಾದ ಸೂತ್ರವಿರುವುದಿಲ್ಲ. ಮೂಲ ಮೊಕದ್ದಮೆಯಲ್ಲಿ ದಾಖಲೆಗೊಂಡ ಸಾಕ್ಷ್ಯಾಧಾರಗಳು ಎದುರುದಾರರನ್ನು ಹೇಗೆ ವಿಭಜಿತ ದೋಷಾರೋಪಣಾ ಪಟ್ಟಿಯಿಂದ ಹೊರಗಿಡಲು ಸಾಧ್ಯವೆಂದು

* ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ: 648/2016,
ದಿನಾಂಕ: 13ನೇ ಜನವರಿ, 2017.

**ಅಧಿವಿಚಾರಣಾ ನ್ಯಾಯಾಲಯವು ವಿಮರ್ಶೆ ಮಾಡಿರುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** **ಪ್ಯಾರಾಗಳಲ್ಲಿ**

*1. ಐಎಲ್‌ಆರ್ 2015 ಕರ್ನಾಟಕ 970*
*ಹೈದರ್ -ವಿರುದ್ಧ- ಕರ್ನಾಟಕ ರಾಜ್ಯ, ಪ್ರತಿನಿಧಿಸಿದವರು*
*ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಉಡುಪಿ (ಉಲ್ಲೇ) 3*

*2. 2007 (15) ಎಸ್‌ಸಿಸಿ 305*
*ದೀಪಕ್ ರಜಕ್ -ವಿರುದ್ಧ- ಪಶ್ಚಿಮ ಬಂಗಾಳ ರಾಜ್ಯ (ಉಲ್ಲೇ) 3*

*3. ಐಎಲ್‌ಆರ್ 2005 ಕರ್ನಾಟಕ 1822*
*ಕರ್ನಾಟಕ ರಾಜ್ಯ -ವಿರುದ್ಧ- ಕೆ.ಸಿ. ನರಸೇಗೌಡ (ಉಲ್ಲೇ) 3*

*4. ಐಎಲ್‌ಆರ್ 2003 ಕರ್ನಾಟಕ 3958*
*ಕರ್ನಾಟಕ ರಾಜ್ಯ, ಪೊಲೀಸ್ ಇನ್ಸ್‌ಪೆಕ್ಟರ್,*
*ಬಾಗೇಪಲ್ಲಿ -ವಿರುದ್ಧ- ವಡ್ಡೆ ಯರ್ರೆ*
*ವೆಂಕಟರಮಣ @ ರಾಜು ಮತ್ತು ಇತರರು (ಉಲ್ಲೇ) 3*

*5. 1998(5) ಎಸ್‌ಸಿಸಿ 749*
*ಪೆಪ್ಸಿ ಫುಡ್ ಲಿಮಿಟೆಡ್ -ವಿರುದ್ಧ-*
*ನ್ಯಾಯಿಕ ಮ್ಯಾಜಿಸ್ಟ್ರೇಟ್ (ಉಲ್ಲೇ) 10*

*6. (2013) 4 ಎಸ್‌ಸಿಸಿ 505*
*ಮೆಸರ್ಸ್ ಜಿಹೆಚ್‌ಸಿಎಲ್ ಉದ್ಯೋಗಿಗಳ ಸ್ಟಾಕ್*
*ಆಪ್ಷನ್ ಟ್ರಸ್ಟ್ -ವಿರುದ್ಧ-*
*ಮೆಸರ್ಸ್ ಇಂಡಿಯಾ ಇನ್‌ಪೊಲೈನ್ ಲಿಮಿಟೆಡ್ (ಉಲ್ಲೇ) 10*

7. *(2015) 4 ಎಸ್‌ಸಿಸಿ 609*
*ಸುನಿಲ್ ಭಾರತಿ ಮಿತ್ತಲ್ –ವಿರುದ್ಧ–*
*ಸಿಬಿಐ (ಕೇಂದ್ರೀಯ ತನಿಖಾ ಸಂಸ್ಥೆ) (ಉಲ್ಲೇ) 10*

8. *(2015) 12 ಎಸ್‌ಸಿಸಿ 420*
*ಮೆಹಮೂದ್ ಹುಲ್ ರೆಹಮಾನ್ –ವಿರುದ್ಧ–*
*ಖಾಜಿರ್ ಮೊಹಮದ್ ತುಂಡಾ ಮತ್ತು ಇತರರು (ಉಲ್ಲೇ) 10*

9. *(2011) 15 ಎಸ್‌ಸಿಸಿ 1*
*ಮುಖ್ಯ ಮಾಹಿತಿ ಆಯುಕ್ತ ಮತ್ತು ಮತ್ತೊಬ್ಬರು*
*–ವಿರುದ್ಧ– ಮಣಿಪುರ್ ರಾಜ್ಯ ಮತ್ತು ಮತ್ತೊಬ್ಬರು (ಉಲ್ಲೇ) 17*

ಅರ್ಜಿದಾರರ ಪರ : ಶ್ರೀ ನಾಗೇಶ್ವರಪ್ಪ, ಹೆಚ್‌ಸಿಜಿಪಿ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ** :

ವಿಷಯವನ್ನು ಅಂಗೀಕರಿಸುವುದಕ್ಕಾಗಿ ಪಟ್ಟಿ ಮಾಡಿದ್ದಾಗ್ಯೂ, ಅಂತಿಮ ನ್ಯಾಯ ನಿರ್ಣಯಕ್ಕಾಗಿ ಉಚ್ಚ ನ್ಯಾಯಾಲಯದ ಸರ್ಕಾರಿ ಮಾನ್ಯ ನ್ಯಾಯವಾದಿ ಅವರ ಅಹವಾಲನ್ನು ಅಂಗೀಕರಿಸಲಾಗಿದೆ.

ರಾಜ್ಯವು, ಸೆಷನ್ಸ್ ನ್ಯಾಯಾಲಯ ದಿನಾಂಕ 15.12.2015ರಂದು ಪ್ರತ್ಯರ್ಜಿದಾರ/ಎ4 ನ ಮೊಕದ್ದಮೆಯನ್ನು ಮುಕ್ತಾಯಗೊಳಿಸಿ ವಿಲೆ ಮಾಡುವಂತೆ ಹೊರಡಿಸಿದ ಆಜ್ಞೆಯನ್ನು ಪ್ರಶ್ನಿಸಿದೆ.

2. ಈ ಅರ್ಜಿಯ ನ್ಯಾಯ ನಿರ್ಣಯ ಸಂಬಂಧದಲ್ಲಿ ಪ್ರಸಕ್ತ ಸಂಗತಿಗಳೆಂದರೆ, ಭಾರತ ದಂಡ ಸಂಹಿತೆಯ 399ನೇ ಮತ್ತು 402ನೇ ಪ್ರಕರಣದ ಅಡಿಯಲ್ಲಿ ದಂಡನೀಯು ಅಪರಾಧವಾಗಿರುವ ಸಂಬಂಧದಲ್ಲಿ ಪ್ರತ್ಯರ್ಜಿದಾರ (ತಲೆ ಮರೆಸಿಕೊಂಡಿರುವ ಆಪಾದಿತ ಸಂಖ್ಯೆ 4) ಮತ್ತು 4 ಜನ ಇತರರು ವಿರುದ್ಧ ಅರ್ಜಿದಾರ ಪೊಲೀಸರು ಸಲ್ಲಿಸಿದ ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಮೂವರು ಆಪಾದಿತರು ತಲೆ ಮರೆಸಿಕೊಂಡಿರುವ ಕಾರಣದಿಂದ ಮೊಕದ್ದಮೆಯನ್ನು ಪ್ರತ್ಯೇಕಿಸಲಾಗಿದೆ ಮತ್ತು ನ್ಯಾಯಾಲಯ ದಿನಾಂಕ 15.6.2015ರ ತೀರ್ಪಿನಲ್ಲಿ ಎ–1 ಮತ್ತು ಎ–5 ಇವರ ವಿಚಾರಣೆಯನ್ನು ಮುಂದುವರೆಸಿದೆ ಮತ್ತು ಅವರನ್ನು ಖುಲಾಸೆಗೊಳಿಸಿದೆ. ತದನಂತರದಲ್ಲಿ, ಎ–2 ಮತ್ತು ಎ–3 ಅವರನ್ನು ಅಧಿವಿಚಾರಣೆ ಮಾಡಲಾಯಿತು ಮತ್ತು ದಿನಾಂಕ 16.2.2012ರ ತೀರ್ಪಿನ ಮೂಲಕ ಅವರನ್ನು ಆರೋಪಗಳಿಂದ ಖುಲಾಸೆಗೊಳಿಸಲಾಯಿತು. ಆ ಕಾರಣದಿಂದ ಏಕೈಕ ಆಪಾದಿತ ಪ್ರತ್ಯರ್ಜಿದಾರನ ಸಂದರ್ಭದಲ್ಲಿ ಅವನನ್ನು ಪ್ರತ್ಯೇಕಿಸಲು ಮತ್ತು ಅವನ ವಿರುದ್ಧ ಜಾಮೀನೀಯವಲ್ಲದ ವಾರೆಂಟನ್ನು ಆದೇಶಿಸಿದೆ. ಆದರೆ ಅವನನ್ನು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಪಬ್ಲಿಕ್ ಪ್ರಾಸಿಕ್ಯೂಟರ್ ಅವರ ವಾದವನ್ನು ಆಲಿಸಿದ ನಂತರ 15.12.2015ರಂದು ಸಂಬಂಧಪಟ್ಟ ನ್ಯಾಯಾಲಯವು ಆಕ್ಷೇಪಿತ ಆದೇಶವನ್ನು ಹೊರಡಿಸಿದೆ. ಓದಲಾದ ಆದೇಶದ ಕೊನೆಯ ಪ್ಯಾರಾವು ಹೀಗಿದೆ:

> *“ನಮ್ಮ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ಮೇಲಿನ ತೀರ್ಮಾನದ ಬೆಳಕಿನಲ್ಲಿ, ಈಗಾಗಲೇ ಖುಲಾಸೆಗೊಂಡಿರುವ ಮೇಲಿನ ಆಪಾದಿತನ ಆ ಯಾವುವೇ ಅಪರಾಧಗಳ ಸಂಬಂಧದಲ್ಲಿ ಪ್ರಸ್ತುತ ಅಪರಾಧಿ ಎಂದು ನಿರ್ಣಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದರಂತೆ ಎ–4ನನ್ನು ಹಾಜರುಪಡಿಸಲು ನಿಶ್ಚಿತ ಪಡಿಸಲು ಪ್ರೇರೇಪಿಸುವುದಕ್ಕೆ ಬದಲಾಗಿ ಮೊಕದ್ದಮೆಯುನ್ನು ಮುಕ್ತಾಯಗೊಳಿಸಬೇಕಾಗುತ್ತದೆ. ಪ್ರಸ್ತುತ ಮೊಕದ್ದಮೆಯ*

*ಸಂದರ್ಭದಲ್ಲಿ ಅದು ಮುಕ್ತಾಯವಾಗಿರುವಂತೆ ಅದನ್ನು ವಿಲೇ ಮಾಡಬೇಕಾಗುತ್ತದೆ. ಅದರ ಅನುಸಾರವಾಗಿ ಈ ಮೊಕದ್ದಮೆಯನ್ನು ಮುಕ್ತಾಯವಾದಂತೆ ವಿಲೇ ಮಾಡಲಾಗಿದೆ".*

3. ಮಾನ್ಯ ವಿಚಾರಣಾ ನ್ಯಾಯಾಲಯಕ್ಕೆ ಮೇಲಿನ ಮುಕ್ತಾಯವನ್ನು ವ್ಯಾಪ್ತಗೊಳಿಸುವ ಸಂಬಂಧದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಅವಲಂಬಿಸಿ ಮಂಡಿಸಿದೆ:

(1) ***ಹೈದರ್ –ವಿರುದ್ಧ– ಕರ್ನಾಟಕ ರಾಜ್ಯ, ಪ್ರತಿನಿಧಿಸಿದವರು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಉಡುಪಿ*** [1];

(2) ***ದೀಪಕ್ ರಜಕ್ –ವಿರುದ್ಧ– ಪಶ್ಚಿಮ ಬಂಗಾಳ ರಾಜ್ಯ*** [2];

(3) ***ಕರ್ನಾಟಕ ರಾಜ್ಯ –ವಿರುದ್ಧ– ಕೆ.ಸಿ. ನರಸೇಗೌಡ*** [3];

(4) ***ಕರ್ನಾಟಕ ರಾಜ್ಯ, ಪೊಲೀಸ್ ಇನ್ಸ್‌ಪೆಕ್ಟರ್, ಬಾಗೇಪಲ್ಲಿ –ವಿರುದ್ಧ– ವಡ್ಡೆ ಯರ‍್ರೆ ವೆಂಕಟರಮಣ @ ರಾಜು ಮತ್ತು ಇತರರು*** [4].

4. ಆಕ್ಷೇಪಿತ ಆದೇಶದ ಕಾನೂನು ಸಮ್ಮತತೆಯನ್ನು ಪರೀಕ್ಷಿಸುವ ಮುಂಚೆ, ಮೇಲಿನ ತೀರ್ಪುಗಳನ್ನು ತಾತ್ಕಾಲಿಕವಾಗಿ ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

---

1. ಐಎಲ್‌ಆರ್ 2015 ಕರ್ನಾಟಕ 970
2. 2007 (15) ಎಸ್‌ಸಿಸಿ 305
3. ಐಎಲ್‌ಆರ್ 2005 ಕರ್ನಾಟಕ 1822
4. ಐಎಲ್‌ಆರ್ 2003 ಕರ್ನಾಟಕ 3958

5. ***ಹೈದರ್*** (ಮೇಲಿನ) ಮೊಕದ್ದಮೆಯು, ಮುಖ್ಯ ಮೊಕದ್ದಮೆಯ ವಿರುದ್ಧ ಸಹ ಆಪಾದಿತನು ಖುಲಾಸೆಗೊಳ್ಳುವವರೆಗೂ ಅವನ ವಿರುದ್ಧದ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಗೊಳಿಸಲು ಆಪಾದಿತ ವ್ಯಕ್ತಿಗಳ ಆರೋಪ ಪಟ್ಟಿಯನ್ನು ಪ್ರತ್ಯೇಕಿಸಲು ಕೋರಿರುವುದರಿಂದ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತತೆಗಾಗಿ 'ಸಂಹಿತೆ') 482ನೇ ಪ್ರಕರಣದ ಅಡಿಯಲ್ಲಿ ಈ ಮೊಕದ್ದಮೆ ದಾಖಲುಗೊಂಡಿದೆ. ಈ ನ್ಯಾಯಾಲಯದ ಸಮನ್ವಯ ಪೀಠವು 'ಸಹ ಆಪಾದಿತನಾಗಿರುವ ಸಂದರ್ಭದಲ್ಲಿ ಖುಲಾಸೆಗೊಂಡು ಪ್ರಯೋಜನವನ್ನು ಅವನು ನ್ಯಾಯಾಲಯದ ಮುಂದೆ ಶರಣಾಗಿದ್ದರೆ ಮಾತ್ರವೇ ಅವನಿಗೆ ಅದನ್ನು ವ್ಯಾಪ್ತಗೊಳಿಸಬೇಕಾಗುತ್ತದೆ' ಎಂಬ ವ್ಯಕ್ತ ಅಭಿಪ್ರಾಯವನ್ನು ಪರಿಶೀಲಿಸಿ, ಆಪಾದಿತ ಅರ್ಜಿದಾರರಿಗೆ ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಮೊದಲು ಶರಣಾಗುವುದಕ್ಕೆ ಮತ್ತು ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಮಂಡಿಸಲು ನಿರ್ದೇಶಿಸುತ್ತದೆ.

6. (ಮೇಲಿನ) ***ದೀಪಕ್ ರಜಕ್*** ಅವರ ಮೊಕದ್ದಮೆಯಲ್ಲಿ, ಅಪೆಕ್ಸ್ ನ್ಯಾಯಾಲಯದ ಮುಂದೆ ನಿರ್ಣೀತನಾದ ಅಪರಾಧಿ ಅಪೀಲಿನಲ್ಲಿ ಇದ್ದಲ್ಲಿ ಅದೇ ಸ್ಥಾನದಲ್ಲಿರುವ ಸಹವರ್ತಿ ಅಪರಾಧಿಯು ಖುಲಾಸೆಗೊಂಡಿರುತ್ತಾನೆ. ಅದೇ ರೀತಿಯ ಸಂಗತಿಗಳ ಸಂವರ್ಗದ ಮೇಲೆ ಮತ್ತು ಅದೇ ರೀತಿಯ ಅಪರಾಧಗಳ ಮೇಲೆ ಅದೇ ಸ್ಥಾನದಲ್ಲಿರುವ ಸಹವರ್ತಿ ಆಪಾದಿತನು ಖುಲಾಸೆಗೊಂಡಿರುವ ಮೊಕದ್ದಮೆಯಲ್ಲಿ ಏನು ಸಂಭವಿಸಿತೋ ಅಂತೆಯೇ ಇಲ್ಲಿ ಕಾನೂನಿನ ಇರುವಿಕೆಯನ್ನು ಎತ್ತಿಹಿಡಿಯಲಾಗಿದೆ, ನ್ಯಾಯಾಲಯದ ಮುಂದೆ ಅಪೀಲುದಾರ/ಆಪಾದಿತನು ಅದೇ ರೀತಿಯ ಅಪರಾಧಗಳ ಮೇಲೆ ಸಹವರ್ತಿ ಅಪರಾಧಿ ಖುಲಾಸೆಗೊಳ್ಳುವ ಪ್ರಯೋಜನವನ್ನು ಪಡೆಯುವುದಕ್ಕೆ ವ್ಯಾಪ್ತಗೊಳ್ಳಲು ಅಪೀಲು ಸಲ್ಲಿಸಿರುವುದು.

7. (ಮೇಲಿನ) ***ಕೆ.ಸಿ. ನರಸೇಗೌಡ*** ಇವರ ಮೊಕದ್ದಮೆಯಲ್ಲಿ, ಸೆಷನ್ಸ್ ನ್ಯಾಯಾಲಯವು ದೋಷಿ ಎಂದು ಉದ್ಘೋಷಿಸಿದ ನಂತರ ಅಪರಾಧಿ ಜಾಮೀನಿನ ಮೇಲೆ ತಪ್ಪಿಸಿಕೊಂಡಿರುವ ವಸ್ತು ವಿಷಯವನ್ನು ಅಪೆಕ್ಸ್ ನ್ಯಾಯಾಲಯವು ಕಠಿಣವಾಗಿ ಪರಿಗಣನೆಗೆ ತೆಗೆದುಕೊಂಡಿದೆ. ಆದರೂ ಅವನನ್ನು ಪತ್ತೆ ಮಾಡುವುದಕ್ಕೆ

ಕ್ರಮಗಳನ್ನು ತೆಗೆದುಕೊಂಡರು. ಅವನನ್ನು ಪತ್ತೆ ಮಾಡಲು ಸಾಧ್ಯವಾಗಿರುವುದಿಲ್ಲ. ಅಪರಾಧಿ ಎಂಬ ತೀರ್ಪಿನ ವಿರುದ್ಧ ಅಪರಾಧಿಯಾಗಿರುವ ಸಹವರ್ತಿ ಆರೋಪಿಯು ಮಾಡಿದ ಅಪೀಲನ್ನು ಅನುಮತಿಸುವುದು ಮತ್ತು ಅವರನ್ನು ಖುಲಾಸೆಗೊಳಿಸುವುದು. ಸೆಷನ್ಸ್ ನ್ಯಾಯಾಧೀಶರು ಸಂಹಿತೆಯ 395ನೇ ಪ್ರಕರಣದ ಮೇರೆಗಿನ ಉಲ್ಲೇಖಗಳ ಪ್ರಕಾರ ಈ ನ್ಯಾಯಾಲಯದ ವಿಶೇಷಾಧಿಕಾರವನ್ನು ಅಪೇಕ್ಷಿಸುವರು. ವಿಭಾಗೀಯ ಪೀಠ ಸೆಷನ್ಸ್ ನ್ಯಾಯಾಧೀಶರು ಕಡತವನ್ನು ಇಟ್ಟುಕೊಳ್ಳುವುದಕ್ಕೆ ಪ್ರತಿಪಾದಿಸಿರುವುದನ್ನು ಅದು ಯುಕ್ತವಾಗಿ ಪರಿಗಣಿಸಿ, ಅಪರಾಧಿಯಾಗಿರುವ ಆಪಾದಿತನು ತಲೆ ಮರೆಸಿಕೊಂಡಿರುವ ಸಂಬಂಧದಲ್ಲಿ ಅವನಿಗೆ ಶಿಕ್ಷೆ ವಿಧಿಸುವುಕ್ಕೆ ಮತ್ತು ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಉಲ್ಲೇಖಗಳ ಮುಖಾಂತರ ನಿರ್ವಹಣೆ ಸಾಧ್ಯವಾಗದಿರುವುದನ್ನು ಅದರ ಅಧಿಕಾರ ವ್ಯಾಪ್ತಿಯಲ್ಲಿ ಚಲಾಯಿಸಲು, ಪ್ರತೀಕ್ಷಿಸುವುದಕ್ಕಾಗಿ, ಅಪರಾಧಿ ಎಂಬ ತೀರ್ಪನ್ನು ತಳ್ಳಿಹಾಕಿ, ವಿಚಾರಣಾ ನ್ಯಾಯಾಲಯವು ಸಹವರ್ತಿ ಆಪಾದಿತನನ್ನು ಅಪರಾಧಿ ಎಂದು ನಿರ್ಣೀತವಾಗುವವರೆಗೂ, ಸಹವರ್ತಿ ಅಪರಾಧಿಯನ್ನು ಈ ನ್ಯಾಯಾಲಯವು ಖುಲಾಸೆಗೊಳಿಸುತ್ತದೆ.

8. (ಮೇಲಿನ) ***ವಡ್ಡೆ ಯರ್ರೆ ವೆಂಕರಮಣ*** ಅವರ ಮೊಕದ್ದಮೆಯ ವಸ್ತು ವಿಷಯದಲ್ಲಿ, ವಿಚಾರಣಾ ನ್ಯಾಯಾಲಯವು ಆಪಾದಿತವ್ಯಕ್ತಿಗಳು ಆಪಾದಿತರೆಂದು ನಿಶ್ಚಿತವಾಗುವವರೆಗೂ ಮತ್ತು ಸಾಕ್ಷಿದಾರರು ಲಭ್ಯವಾಗದಿರುವಾಗಲು ಸಹ ಇಬ್ಬರು ಆಪಾದಿತ ವ್ಯಕ್ತಿಗಳನ್ನು ಖುಲಾಸೆಗೊಳಿಸಿರುತ್ತದೆ. ಇತರ ಇಬ್ಬರು ಆಪಾದಿತರನ್ನು ಬಿಡುಗಡೆಗೊಳಿಸಿರುತ್ತದೆ. ವಿಭಾಗೀಯ ಪೀಠ ಆಪಾದಿತನನ್ನು ಪತ್ತೆ ಮಾಡುವುದಕ್ಕೆ ತೆಗೆದುಕೊಂಡ ಎಲ್ಲ ಅಗತ್ಯ ಕ್ರಮಗಳನ್ನು ತನ್ನ ಗಮನಕ್ಕೆ ತೆಗೆದುಕೊಂಡ ಮೇಲೆ ಹಸ್ತಕ್ಷೇಪ ಮಾಡುವುದಕ್ಕೆ ನಿರಾಕರಿಸುತ್ತವೆ. ಈ ಸಂದರ್ಭದಲ್ಲಿ ಅದು "ಲಭ್ಯವಿರದಿರುವ ಆಪಾದಿತನಿಗೆ ಅಥವಾ ಸಾಕ್ಷಿದಾರನಿಗೆ ಸಂಬಂಧಿಸಿದ ಹಳೆಯ ಪ್ರಕರಣಗಳ ದಾಖಲೆಗಳನ್ನು ಇಟ್ಟುಕೊಳ್ಳುವುದಕ್ಕೆ ಅದು ಇಚ್ಛಿಸುವುದಿಲ್ಲ ಅಥವಾ ಅನುಮತಿಸುವುದಿಲ್ಲ" ಎಂಬುದನ್ನು ಅನುಸರಿಸಿದೆ.

9. ಈ ಮೊಕದ್ದಮೆ ವಿಷಯದ ಸಂಬಂಧದಲ್ಲಿ ಮೇಲಿನ ನಾಲ್ಕು ಮೊಕದ್ದಮೆಗಳಲ್ಲಿ ಅದು ಸ್ಪಷ್ಟವಾಗದಿರುವುದರಿಂದ, ಕೆಳ ನ್ಯಾಯಾಲಯವು ಮೊಕದ್ದಮೆಯನ್ನು ಮುಕ್ತಾಯಗೊಳಿಸುವುದಕ್ಕೆ, ತಲೆ ಮರೆಸಿಕೊಂಡಿರುವ ಆಪಾದಿತ ವ್ಯಕ್ತಿಯ ಆರೋಪ ಪಟ್ಟಿಯನ್ನು ಪ್ರತ್ಯೇಕಿಸುವ ವಿಷಯಕ್ಕೆ ಸಂಬಂಧ ಪಟ್ಟಂತೆ ಪರಿಗಣಿಸುವ ಸಲುವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ನ್ಯಾಯಾಲಯ ತನ್ನ ಕಡತಗಳಿಂದ ವಿಷಯಸೂಚಿಯನ್ನು ಸುಲಲಿತವಾಗಿ ವಿಲೇ ಮಾಡುವುದಕ್ಕೆ ತನ್ನ ಅನುಕೂಲಕ್ಕೆ ತಕ್ಕಂತೆ ಅದು ತೀರ್ಪುಗಳನ್ನು ಕೆಳಗಿನಂತೆ ತಪ್ಪಾಗಿ ಓದಿಕೊಂಡಿದೆ. ಸಂಹಿತೆಯಲ್ಲೂ, ಉದ್ದೇಶಿಸಿದ ಪ್ರಕ್ರಿಯೆಯಲ್ಲೂ, 'ಮುಕ್ತಾಯವಾದಂತೆ ಮೊಕದ್ದಮೆಯನ್ನು ವಿಲೇ ಮಾಡುವುದು' ಎಂದೂ ಎಲ್ಲೂ ಸಹಾ ಉಲ್ಲೇಖಿಸಿರುವುದಿಲ್ಲ. ಅಂಥ ಪರಿಕಲ್ಪನೆಯೇ ಕಾನೂನಿಗೆ ಅಜ್ಞಾತವಾದುದು. ಸಂಹಿತೆಯ 258ನೇ ಪ್ರಕರಣದಲ್ಲಿ ಒಳಗೊಂಡಿರುವಂತೆ, ಫಿರ್ಯಾದಿನ ಮೇಲೆ ಅಲ್ಲದೆ ಅನ್ಯಥಾ ಹೂಡಲಾಗಿರುವ ಮೊಕದ್ದಮೆಯಲ್ಲಿನ ಸಮನುಗಳಲ್ಲಿ ಮ್ಯಾಜಿಸ್ಟ್ರೇಟ್‌ರವರಿಂದ ದಾಖಲಿಸಬಹುದಾದ ಕಾರಣಗಳಿಗಾಗಿ ಮ್ಯಾಜಿಸ್ಟ್ರೇಟರಿಂದ ಪ್ರಕ್ರಿಯೆಯನ್ನು ನಿಲ್ಲಿಸಬಹುದಾಗಿದೆ. ಇದರ ಹೊರತಾಗಿ, ಈ ಕೆಳಕಂಡಂತೆ ಕ್ರಿಮಿನಲ್ ಮೊಕದ್ದಮೆಯನ್ನು ಆ ಯಾವುದೇ ಪರಿಸ್ಥಿತಿಗಳಲ್ಲಿ ಮುಕ್ತಾಯಗೊಳಿಸಬಹುದಾಗಿರುತ್ತದೆ.

10. ಮೊದಲ ಸನ್ನಿವೇಶದಲ್ಲಿ ನ್ಯಾಯಾಲಯವು, ಸಂಹಿತೆಯ 190ನೇ ಪ್ರಕರಣದ ಅಡಿಯಲ್ಲಿ ದೂರು/ಪೊಲೀಸು ವರದಿ ಅಥವಾ ಅದು ನೇರವಾಗಿ ಸ್ವೀಕರಿಸಿದ ಮಾಹಿತಿಯ ಮೇಲೆ ಅಪರಾಧವನ್ನು ತನ್ನ ಸಂಜ್ಞಾನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮ್ಯಾಜಿಸ್ಟ್ರೇಟರು ಆ ಯಾವುದೇ ಅಪರಾಧದ ಸಂಬಧದಲ್ಲಿ ತಮ್ಮ ಜ್ಞಾನವನ್ನು ಅಗತ್ಯವಾಗಿ ಅನ್ವಯಿಸಿ, ಅದರಂತೆ ಅವರು ಸಮನ್ಸ್‌ಗಳನ್ನು ಜಾರಿ ಮಾಡುವುದು ಮತ್ತು ಅವರು ತಮ್ಮ ಮುಂದಿರುವ ಸಾಮಗ್ರಿಗಳನ್ನಾಗಲೀ ಅಥವಾ ಆ ಯಾವುದೇ ಕ್ರಿಮಿನಲ್ ಅಪರಾಧದ ಮೇಲ್ನೋಟದ ಮೊಕದ್ದಮೆಯಾಗಿ ಮಾಡದಿರುವುದನ್ನು ತನ್ನ ಸಂಜ್ಞಾನಕ್ಕೆ ತೆಗೆದುಕೊಳ್ಳುವುದಕ್ಕೆ ಮ್ಯಾಜಿಸ್ಟ್ರೇಟರ್‌ರವರು

***ಪೆಪ್ಸಿ ಫುಡ್ ಲಿಮಿಟೆಡ್ –ವಿರುದ್ಧ– ನ್ಯಾಯಿಕ ಮ್ಯಾಜಿಸ್ಟ್ರೇಟ್*** [5], ***ಮೆಸರ್ಸ್ ಜಿಹೆಚ್‌ಸಿಎಲ್ ಉದ್ಯೋಗಿಗಳ ಸ್ಟಾಕ್ ಆಪ್ಷನ್ ಟ್ರಸ್ಟ್ –ವಿರುದ್ಧ– ಮೆಸರ್ಸ್ ಇಂಡಿಯಾ ಇನ್‌ಫೋಲೈನ್ ಲಿಮಿಟೆಡ್*** [6], ***ಸುನಿಲ್ ಭಾರತಿ ಮಿತ್ತಲ್ –ವಿರುದ್ಧ– ಸಿಬಿಐ (ಕೇಂದ್ರೀಯ ತನಿಖಾ ಸಂಸ್ಥೆ)*** [7] ಮತ್ತು ***ಮೆಹಮೂದ್ ಹುಲ್ ರೆಹಮಾನ್ –ವಿರುದ್ಧ– ಖಾಜಿರ್ ಮೊಹಮದ್ ತುಂಡಾ ಮತ್ತು ಇತರರು*** [8] ಮೊಕದ್ದಮೆಯನ್ನು ಉಲ್ಲೇಖಿಸಿ ನಿರಾಕರಿಸಿರುವರು.

11. ಮತ್ತೊಂದು ಸನ್ನಿವೇಶದಲ್ಲಿ, ಮ್ಯಾಜಿಸ್ಟ್ರೇಟರು ಸಂಹಿತೆಯ 200ನೇ ಪ್ರಕರಣದ ಅಡಿಯಲ್ಲಿ ದೂರನ್ನು ಸ್ವೀಕರಿಸಿರುವಾಗ, 202ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ತನಿಖೆ ಕೈಗೊಂಡಿರುವಾಗ ಮತ್ತು ದೂರುದಾರರ ಮತ್ತು ಸಾಕ್ಷಿದಾರರ ಸಾಕ್ಷ್ಯಗಳನ್ನು ದಾಖಲಿಸಿರುವಾಗ, ತದನಂತರದಲ್ಲಿ, ಆಪಾದಿತನಿಗೆ ಸಮನುಗಳನ್ನು ಹೊರಡಿಸುವ ಕಾರ್ಯವಿಧಾನದ ಸಂಬಂಧದಲ್ಲಿ ಸೂಕ್ತವಾದ ಕಾರಣಗಳು ಕಂಡು ಬರುವುದಿಲ್ಲವೆಂದು ನಿರ್ಣಯಿಸಿರುತ್ತಾರೆ. ಅವರು ಸಂಹಿತೆಯ 303ನೇ ಪ್ರಕರಣದ ಅಡಿಯಲ್ಲಿ ದೂರನ್ನು ವಜಾ ಮಾಡಿರುವರು. ಇದು ಅಧಿವಿಚಾರಣೆಯು ಪ್ರಾರಂಭಕ್ಕೆ ಮುಂಚಿನದಾಗಿರುತ್ತದೆ.

12. ವಾರೆಂಟ್ ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟರು, ಆರೋಪಗಳು ಸಕಾರಣವಾಗಿರುವುಗಳೆಂದು ಕಂಡುಬಂದರೆ ಪ್ರತಿವಾದಕ್ಕೆ ಮತ್ತು ಪ್ರಾಸಿಕ್ಯೂಷನ್‌ಗೆ ವಾದಿಸಲು ಅವಕಾಶ ನೀಡಿದ ನಂತರ ಆರೋಪಗಳನ್ನು ನಿರೂಪಿಸುವ ಮುಂಚೆ ಸಂಹಿತೆಯ 289ನೇ ಪ್ರಕರಣದ ಅಡಿಯಲ್ಲಿರುವಂತೆ ವ್ಯಕ್ತಿಯನ್ನು ವಿಮುಕ್ತಗೊಳಿಸಬಹುದಾಗಿದೆ.

13. ಮುಂದಿನ ಹಂತವಾಗಿ, ಪ್ರಾಸಿಕ್ಯೂಷನ್ ಸಾಕ್ಷ್ಯವನ್ನು ದಾಖಲಿಸಿದ ನಂತರ, ಪ್ರಾಸಿಕ್ಯೂಷನ್‌ನಿಂದ ಯಾವುದೇ ಮೊಕದ್ದಮೆ ಸಾಬೀತುಪಡಿಸದಿದ್ದಲ್ಲಿ,

---

5. 1998(5) ಎಸ್‌ಸಿಸಿ 749
6. (2013) 4 ಎಸ್‌ಸಿಸಿ 505
7. (2015)4 ಎಸ್‌ಸಿಸಿ 609
8. (2015) 12 ಎಸ್‌ಸಿಸಿ 420

ಸಂಹಿತೆಯ 245ನೇ ಪ್ರಕರಣದ ಅಡಿಯಲ್ಲಿ ಇಬ್ಬರು ಪಕ್ಷಕಾರರಿಗೆ ವಾದಿಸಲು ಅವಕಾಶ ನೀಡಿದ ನಂತರ, ಅವರು ಮೊಕದ್ದಮೆಯನ್ನು ವಜಾಗೊಳಿಸಬಹುದಾಗಿದೆ.

14. ಮೊಕದ್ದಮೆಯನ್ನು ಮುಂದುವರೆಸುವುದಕ್ಕೆ ಸಾಕಷ್ಟು ಕಾರಣಗಳು ಇಲ್ಲದಿದ್ದಲ್ಲಿ, ಆರೋಪಗಳೇನಾದರೂ ಇದ್ದರೆ ಸೆಷನ್ಸ್ ನ್ಯಾಯಾಲಯದ ವಿಚಾರಣೆಯ ಮುಂದೆ ಅದು ನಿರೂಪಿತವಾಗಿದ್ದರೆ, ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ಆಪಾದಿತನನ್ನು ಬಿಡುಗಡೆಗೊಳಿಸಬಹುದಾಗಿದೆ ಮತ್ತು ಪ್ರಾಸಿಕ್ಯೂಷನ್ ಮೊಕದ್ದಮೆಯ ಹೇಳಿಕೆಗಳನ್ನು ದಾಖಲಿಸಿಕೊಂಡ ನಂತರ, ಅದು ಪ್ರಾಸಿಕ್ಯೂಷನ್ ನಿರೂಪಿಸದಿರುವ ಮೊಕದ್ದಮೆಯಾಗಿದ್ದರೆ, ಸಂಹಿತೆಯ 232ನೇ ಪ್ರಕರಣದ ಅಡಿಯಲ್ಲಿ ಆರೋಪಿಯನ್ನು ಖುಲಾಸೆಗೊಳಿಸಬಹುದಾಗಿದೆ. ಮೇಲಿನವುಗಳನ್ನು ಹೊರತುಪಡಿಸಿ, ಕ್ರಿಮಿನಲ್ ವಿಚಾರಣೆಯನ್ನು ಮುಕ್ತಾಯಗೊಳಿಸುವುದಕ್ಕೆ ಉದ್ದೇಶಿಸಿರುವುದಿಲ್ಲ. ಯಾವುದೇ ಇತರ ರೀತಿಯಿಂದಲೂ ಸಂಹಿತೆಯಲ್ಲಿ ಸಾಧ್ಯವಾಗುವುದಿಲ್ಲ. ಸಂಹಿತೆಯ 234ನೇ ಪ್ರಕರಣದ ಅಡಿಯಲ್ಲಿ ಆಪಾದಿತನ ಪ್ರತಿವಾದವನ್ನು ಕೇಳುವುದಕ್ಕೆ ಕರೆದ ನಂತರ ಮತ್ತು ಇಬ್ಬರು ಪಕ್ಷಕಾರರ ವಾದವನ್ನು ಆಲಿಸಿದ ನಂತರ ಖುಲಾಸೆಗೊಳಿಸಿದ ಅಥವಾ ಅಪರಾಧಿ ನಿರ್ಣಿತದ ತೀರ್ಪನ್ನು ಹಿಂದಿರುಗಿಸಬಹುದಾಗಿದೆ.

15. ಈಗ ತಲೆಮರೆಸಿಕೊಂಡಿರುವ ಆಪಾದಿತನ ಪ್ರಶ್ನೆಗೆ ಬಂದಾಗ, ಅದಕ್ಕೆ ಸಂಹಿತೆಯ 299ನೇ ಪ್ರಕರಣವು, ಸುಸಂಗತವಾಗಿದೆ, ಅದನ್ನು ಈ ಮುಂದಿನಂತೆ ಓದಲಾಗಿದೆ:

> *"**299. ಆಪಾದಿತನ ಗೈರು ಹಾಜರಿಯಲ್ಲಿ ಸಾಕ್ಷ್ಯದ ಅಭಿಲೇಖ.**– (1) ಆಪಾದಿತ ವ್ಯಕ್ತಿಯು ತಲೆತಪ್ಪಿಸಿ ಕೊಂಡಿದ್ದಾನೆಂದು ಮತ್ತು ಅವನನ್ನು ಕೂಡಲೇ ದಸ್ತಗಿರಿ ಮಾಡುವ ಸಂಭವ ಇಲ್ಲವೆಂದು ರುಜುವಾತಾದಾಗ, ಫಿರ್ಯಾದು ನೀಡಲಾದ ಅಪರಾಧಕ್ಕಾಗಿ ಅಂಥ ವ್ಯಕ್ತಿಯನ್ನು ಆರೋಪ ವಿಚಾರಣೆ ಮಾಡಲು (ಅಥವಾ ಅಧಿವಿಚಾರಣೆಗೆ ಒಪ್ಪಿಸಲು)*

*ಸಕ್ಷಮವಾದ ನ್ಯಾಯಾಲಯವು ಅವನ ಗೈರು ಹಾಜರಿಯಲ್ಲಿ, ಪ್ರಾಸಿಕ್ಯೂಷನ್ನಿನ ಪರವಾಗಿ ಹಾಜರುಪಡಿಸಲಾದ ಸಾಕ್ಷಿಗಳನ್ನು (ಯಾರಾದರೂ ಇದ್ದರೆ) ವಿಚಾರಣೆ ಮಾಡಬಹುದು ಮತ್ತು ಅವರ ಅಭಿಸಾಕ್ಷ್ಯಗಳನ್ನು ಅಭಿಲೇಖಿಸಬಹುದು ಮತ್ತು ಅಭಿಸಾಕ್ಷಿಯು ಮೃತಪಟ್ಟಿದ್ದರೆ ಅಥವಾ ಸಾಕ್ಷ್ಯ ನೀಡಲು ಅಸಮರ್ಥನಾಗಿದ್ದರೆ ಅಥವಾ ಅವನು ಸಿಕ್ಕಿರದಿದ್ದರೆ ಅಥವಾ ಮೊಕದ್ದಮೆಯ ಸನ್ನಿವೇಶಗಳಲ್ಲಿ ಅಯುಕ್ತವಾಗಬಹುದಾದಷ್ಟು ವಿಳಂಬ, ವೆಚ್ಚ ಅಥವಾ ಅನನುಕೂಲತೆ ಇಲ್ಲದೆ ಅವನನ್ನು ಹಾಜರುಪಡಿಸಲು ಸಾಧ್ಯವಿಲ್ಲದಿದ್ದರೆ, ಅಂಥ ಯಾವುದೇ ಅಭಿಸಾಕ್ಷ್ಯವನ್ನು ಅಂಥ ವ್ಯಕ್ತಿಯು ದಸ್ತಗಿರಿಯಾದ ಅನಂತರ ಅವನ ಮೇಲೆ ಆರೋಪಿಸಲಾದ ಅಪರಾಧದ ವಿಚಾರಣೆ ಅಥವಾ ಆರೋಪ ವಿಚಾರಣೆಯಲ್ಲಿ ಅವನ ವಿರುದ್ಧದ ಸಾಕ್ಷ್ಯವಾಗಿ ನೀಡಬಹುದು.*

*(2) ಯಾರೇ ಅಪರಿಚಿತ ವ್ಯಕ್ತಿ ಅಥವಾ ವ್ಯಕ್ತಿಗಳಿಂದ, ಮರಣ ದಂಡನೀಯವಾದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧವು ನಡೆದಿದೆಯೆಂದು ಕಂಡುಬಂದರೆ ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಧೀಶನು, ಮೊದಲ ವರ್ಗದ ಯಾರೇ ಮ್ಯಾಜಿಸ್ಟ್ರೇಟರು ಅದರ ವಿಚಾರಣೆ ನಡೆಸತಕ್ಕದ್ದೆಂದು ಮತ್ತು ಅಪರಾಧಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ನೀಡಬಲ್ಲ ಯಾರೇ ಸಾಕ್ಷಿಗಳನ್ನು ವಿಚಾರಣೆ ಮಾಡತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಭಿಸಾಕ್ಷಿಯು ಮೃತಪಟ್ಟಿದ್ದರೆ ಅಥವಾ ಸಾಕ್ಷ್ಯ ನೀಡಲು ಅಸಮರ್ಥನಾಗಿದ್ದರೆ ಅಥವಾ ಭಾರತದ ಪರಿಮಿತಿಗಳಾಚೆ ಇದ್ದರೆ, ಹಾಗೆ ತೆಗೆದುಕೊಳ್ಳಲಾದ ಯಾವುವೇ ಅಭಿಸಾಕ್ಷ್ಯಗಳನ್ನು ತರುವಾಯ*

*ಅಪರಾಧಕ್ಕಾಗಿ ಆಪಾದಿತನಾದ ಯಾರೇ ವ್ಯಕ್ತಿಯ ವಿರುದ್ಧ ಸಾಕ್ಷ್ಯವಾಗಿ ನೀಡಬಹುದು."*

16. ಒಬ್ಬ ಆಪಾದಿತನ ಸಂಬಂಧದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನದಲ್ಲಿ, ಆರೋಪಿ ಆರು ತಿಂಗಳಿಗಿಂತ ಹೆಚ್ಚು ಅವಧಿಗೂ ತಲೆಮರೆಸಿಕೊಂಡಿರುವಾಗ, ಕರ್ನಾಟಕ ಕ್ರಿಮಿನಲ್ ನ್ಯಾಯಾಲಯ ವ್ಯವಹಾರ ನಿಯಮಗಳು 1968ರ IVನೇ ಅಧ್ಯಾಯದಲ್ಲಿರುವುದನ್ನು ಪರಿಗಣಿಸಲಾಗುತ್ತದೆ. ಉಚ್ಚ ನ್ಯಾಯಾಲಯದ ಪೂರ್ವಾನುಮತಿಯೊಂದಿಗೆ ಸೆಷೆನ್ಸ್ ನ್ಯಾಯಾಲಯವು, ಸೆಷೆನ್ಸ್ ನ್ಯಾಯಾಲಯದ ಪೂರ್ವಾನುಮತಿಯೊಂದಿಗೆ ಮ್ಯಾಜಿಸ್ಟ್ರೇಟರು, ದೀರ್ಘಕಾಲದಿಂದ ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವಹಿ (ವಹಿ XIII) ಯಿಂದ ಗೈರು ಹಾಜರಾದ ಆರೋಪಿಯ ವಿರುದ್ಧದ ಮೊಕದ್ದಮೆಯನ್ನು ತೆಗೆದುಹಾಕುವುದಕ್ಕೆ ನಿರ್ದೇಶಿಸತಕ್ಕದ್ದು. ಅದಕ್ಕಿಂತ ಮುಂಚೆ, 82ನೇ ಮತ್ತು 83ನೇ ಪ್ರಕರಣದ ಅಡಿಯಲ್ಲಿ ಕ್ರಮಗಳನ್ನು (ತಲೆ ಮರೆಸಿಕೊಂಡಿರುವ ವ್ಯಕ್ತಿಯ ಸಂಬಂಧದಲ್ಲಿನ ಉದ್ಘೋಷಣೆಯನ್ನು ಮತ್ತು ತಲೆಮರೆಸಿಕೊಂಡಿರುವ ವ್ಯಕ್ತಿಯು ಸ್ವತ್ತಿಗೆ ಲಗತ್ತಿಸುವುದು ನಿಶ್ಯೇಷಗೊಳಿಸತಕ್ಕದ್ದು ಮತ್ತು ಜಾಮೀನಿನ ಬಂಧ ಪತ್ರದಲ್ಲಿ ಬರೆದು ಕೊಟ್ಟದ್ದನ್ನು ಜಾರಿ ಮಾಡಬೇಕು. ಅವಶ್ಯವೆನಿಸಿದರೆ, ಸಂಹಿತೆಯ 446ನೇ ಪ್ರಕರಣದಲ್ಲಿರುವಂತೆ ಉದ್ದೇಶಿತ ಕಾರ್ಯ ವಿಧಾನದಂತೆ ಬಂಧಪತ್ರದಲ್ಲಿ ತೋರಿಸಿರುವ ಮೊತ್ತವನ್ನು ವಸೂಲಿ ಮಾಡುವುದಕ್ಕೆ ಆದೇಶಿಸುವುದು.

17. ಅಪೆಕ್ಸ್ ನ್ಯಾಯಾಲಯ ***ಮುಖ್ಯ ಮಾಹಿತಿ ಆಯುಕ್ತರು ಮತ್ತು ಮತ್ತೊಬ್ಬರು –ವಿರುದ್ಧ– ಮಣಿಪುರ್ ರಾಜ್ಯ ಮತ್ತು ಮತ್ತೊಬ್ಬರು*** [9] ಇದರಲ್ಲಿ ತನ್ನ ಅಭಿಪ್ರಾಯವನ್ನು ಅದು ಹೀಗೆ ವ್ಯಕ್ತಪಡಿಸಿದೆ:

*"ಪ್ರಕ್ರಿಯೆಯನ್ನು ಶಾಸನಾತ್ಮಕವಾಗಿ ಮಂಡಿಸಿರುವಾಗ ಮತ್ತು ಸದರಿ ಪ್ರಕ್ರಿಯೆಗೆ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ*

9. (2011) 15 ಎಸ್‌ಸಿಸಿ 1

*ನ್ಯಾಯಾಲಯ ಅದನ್ನು ವ್ಯಾಖ್ಯಾನಿಸಿಸುವ ಹೆಸರಿನಲ್ಲಿ ವ್ಯಕ್ತವಾದ ಶಾಸನಾತ್ಮಕ ಉಪಬಂಧಕ್ಕೆ ಪ್ರತಿಕೂಲವಾಗುವಂತಹ ಆ ಯಾವುದೇ ಪ್ರಕ್ರಿಯೆಯನ್ನು ಮಂಡಿಸತಕ್ಕದ್ದಲ್ಲ. ಶಾಸನವು ನಿರ್ದಿಷ್ಟ ವಿಧಾನದಲ್ಲಿ ಮಾಡಬೇಕಾದ ಕೆಲವೊಂದು ಪ್ರಕ್ರಿಯೆ ಸಂಬಂಧದಲ್ಲಿ, ಅದನ್ನು ಏಕಮಾತ್ರ ವಿಧಾನದಲ್ಲಿ ಮತ್ತು ಎಲ್ಲ ಇತರ ವಿಧಾನದಲ್ಲಿ ಮಾಡಲು ಅವಶ್ಯಕವಾಗಿ ನಿಷೇಧಿಸಲು ಸಹ ಉಪಬಂಧಿಸಿದೆ".*

18. ಇದು ನೇರವಾಗಿ ಅನ್ವಯವಾಗುವ ಸೂತ್ರವಲ್ಲ, ಆದುದರಿಂದ ಆ ಆರೋಪಪಟ್ಟಿಯನ್ನು ಪ್ರತ್ಯೇಕಿಸುವ ಪರಿಣಾಮವಾಗಿ ಮುಖ್ಯ ಮೊಕದ್ದಮೆಯ ಪರಿಣಾಮವನ್ನು ಅನುಸರಿಸತಕ್ಕದ್ದು. ಮುಖ್ಯ ಮೊಕದ್ದಮೆಯಲ್ಲಿ ಆಪಾದಿತನು ಖುಲಾಸೆಗೊಂಡ ತರುವಾಯವೂ ಪ್ರತ್ಯೇಕಗೊಂಡ ಆರೋಪಪಟ್ಟಿಯ ಆಪಾದಿತ ವ್ಯಕ್ತಿಯ ವಿರುದ್ಧ ಅಪರಾಧದಲ್ಲಿ ಭಾಗಿಯಾಗಿರುವ ಸಾಕ್ಷ್ಯಾಧಾರಗಳು ಇರುವವರೆಗೂ ಅಪರಾಧದ ಸನ್ನಿವೇಶಗಳೂ ಇರಬೇಕಾಗುತ್ತದೆ. ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳೂ ವಿಭಿನ್ನವಾಗಿರುತ್ತದೆ ಮತ್ತು ಮುಖ್ಯ ಮೊಕದ್ದಮೆಯ ಪರಿಣಾಮವನ್ನು ಪ್ರತ್ಯೇಕಗೊಂಡ ಆರೋಪಪಟ್ಟಿಗೆ ಮುಖ್ಯ ಮೊಕದ್ದಮೆಯಲ್ಲಿನ ಅನಿಶ್ಚಿತ ಗುಣಮಟ್ಟದ ರೂಪದ ಸಾಕ್ಷ್ಯಾಧಾರವನ್ನು ತಂದು ಅನ್ವಯಿಸಲು ಸಾಧ್ಯವಾಗುವುದಿಲ್ಲ. ವಿಚಾರಣಾ ನ್ಯಾಯಾಲಯವು ಮುಖ್ಯ ಮೊಕದ್ದಮೆಯಲ್ಲಿ ಸಾಕ್ಷ್ಯಾಧಾರಗಳು ಹೇಗೆ ದಾಖಲಿತವಾಗಿದೆ ಎಂಬುದು, ಪ್ರತ್ಯೇಕಗೊಂಡ ಆರೋಪಪಟ್ಟಿಯ ಆಪಾದಿತ ವ್ಯಕ್ತಿಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವ ಸಂಬಂಧದಲ್ಲಿ ಯಾವುದೇ ರೀತಿಯಲ್ಲಿ ಯುಕ್ತವಾಗಿ ಚರ್ಚೆಯೇ ಇಲ್ಲಿ ನಡೆದಿರುವುದಿಲ್ಲ.

19. ಮೇಲೆ ಮಾಡಿದ ಚರ್ಚೆಯ ದೃಷ್ಟಿಕೋನದಲ್ಲಿ, ವಿಚಾರಣಾ ನ್ಯಾಯಾಲಯದ ಆದೇಶವು ಊರ್ಜಿತಯೋಗ್ಯವಲ್ಲ. ಈ ನ್ಯಾಯಾಲಯವು ಪರಿಷ್ಕರಣಾ

ಅರ್ಜಿಯನ್ನು ಪುರಸ್ಕರಿಸುತ್ತದೆ. ಅದು ಈ ಮೂಲಕ 56ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷೆನ್ಸ್ ನ್ಯಾಯಾಧೀಶರು, ಬೆಂಗಳೂರು ನಗರ ಇವರು ಎಸ್.ಸಿ.ಸಂ.94/ 2013 ರಲ್ಲಿ ದಿನಾಂಕ 15.12.2015ರಂದು ಹೊರಡಿಸಿದ ಆದೇಶವನ್ನು ರದ್ದುಗೊಳಿಸಿದೆ. ವಿಚಾರಣಾ ನ್ಯಾಯಾಲಯವು ಮೊಕದ್ದಮೆಯನ್ನು ಅದರ ಕಡತವನ್ನು ಪೂರ್ವಸ್ಥಿತಿಗೆ ತರತಕ್ಕದ್ದು ಮತ್ತು ತಲೆಮರೆಸಿಕೊಂಡಿರುವ ಆಪಾದಿತನ ಸಂಬಂಧದಲ್ಲಿ ಸಂಹಿತೆಯಲ್ಲಿ ಉದ್ದೇಶಿತವಾದ ಪ್ರಕ್ರಿಯೆಯನ್ನು ಅನುಸರಿಸಲು ಮತ್ತು ಮೇಲಿನ ಚರ್ಚೆಯ ಬೆಳಕಿನಲ್ಲಿ ವಿಚಾರಣಾ ನ್ಯಾಯಾಲಯವೇ ಮೊಕದ್ದಮೆಯನ್ನು ಮುಂದುವರೆಸತಕ್ಕದ್ದು.

ಕಳೆದ ಎರಡು ತಿಂಗಳಲ್ಲಿ, ಈ ನ್ಯಾಯಾಲಯಕ್ಕೆ ಪ್ರಾಸಿಕ್ಯೂಷನ್ ಅವರು ಒಂದೇ ರೀತಿಯಾಗಿರುವಂತಹ ಮೊಕದ್ದಮೆಗಳಿಗೆ ಸಲ್ಲಿಸಿರುವ ಮೂರನೇ ಪರಿಷ್ಕೃತ ಅರ್ಜಿ ಇದಾಗಿರುತ್ತದೆ. ಇದು ನಮ್ಮ ಕೆಲವು ನ್ಯಾಯಾಲಯಗಳ ಮುಂದಿರುವ ಮೊಕದ್ದಮೆಗಳನ್ನು ಅವುಗಳ ತ್ವರಿತಕ್ಕೆ ಅನ್ವಯವಾಗಿ ಪರಿಸಮಾಪನಗೊಳಿಸಲು ಸುಲಭ ಸಾಧ್ಯವಾಗಿರುವುದನ್ನು ವಿವರಿಸುತ್ತದೆ.

ಆದೇಶದ ಪ್ರತಿಯನ್ನು ನಿರ್ದೇಶಕರು, ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಇವರಿಗೆ ಕಳುಹಿಸುವುದು.